ಶ್ರೀ ಆರ್.ಎನ್. ನಾಯಕ್.—ಬ್ರಿಗೇಡ್ ರಸ್ತೆ ಸುತ್ತಿಕೊಂಡು ಬರಲು ನಿಮ್ಮ ಪಾರ್ಟಿಯ ಬಸ್ ಇಟ್ಟಿದ್ದೀರಂತೆ, ಹೌದೆ ?

(ಗೊಂದಲ)

ಶ್ರೀ ಕೆ. ವಸಂತ ಬಂಗೇರಾ,—ಇದೇನು ಕೋಳಿ ಅಂಕ ಕೆಟ್ಟು ಹೋಯಿತೇನು ? ಶಿಸ್ತು ಕಾರ್ಯಕಲಾಪ ಏನೂ ಇಲ್ಲವೇ ?

ಅಧ್ಯಕ್ಷರು.—ಶಿವಣ್ಣನವರೇ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಶಿವಣ್ಣ.—ಒಂದು ಸರ್ಕಾರಕ್ಕೆ ಬಹುಮತವೇ ಇಲ್ಲವೆಂದ ಮೇಲೆ ಅದರ ಉತ್ತರವನ್ನು ನಾನು ಹೇಗೆ ನಂಬುವುದು ?

(ಗೊಂದಲ)

ಅಧ್ಯಕ್ಷರು.—ಈಗ ಮುಂದಿನ ಕಾಲ್ ಅಟೆನ್‌ಷನ್.

ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಯಿಂದ ಉಂಟಾದ ಉದ್ರಿಕ್ತಪರಿಸ್ಥಿತಿಯ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ದಿನಾಂಕ ೫-೬-೧೯೮೮ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಯಿಂದ ಇಬ್ಬರ ಪರಿಸ್ಥಿತಿ ಅಪಾಯದಲ್ಲಿರುವ ಹಾಗೂ ಆಸ್ಪತ್ರೆಯಲ್ಲಿರುವ ಉದ್ರಿಕ್ತ ಪರಿಸ್ಥಿಯ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸರ್ಕಾರದ ಹೇಳಿಕೆ ಕೆಳಗಿನಂತಿದೆ.

ದಿನಾಂಕ ೫-೬-೧೯೮೮ರಂದು ಸಾಯಂಕಾಲ ೪-೩೦ ಸುಮಾರಿಗೆ ೧೦ ವರ್ಷದ ನಾಗರಾಜನು ತನ್ನ ತಾಯಿಯೊಂದಿಗೆ ಶಿಡ್ಲಘಟ್ಟದ ಉಲ್ಲೂರುಪೇಟೆಯಲ್ಲಿ ಹೋಗುತ್ತಿದ್ದಾಗ ಕೆಲವು ಅಪರಿಚಿತರಲ್ಲಿ ಎಸೆದ ಸ್ಫೋಟಕವು ಆ ಹುಡುಗನ ಬಲ ಕಾಲಿಗೆ ಬಡಿದು ಗಾಯವಾಯಿತು. ತಕ್ಷಣ ಶಿಡ್ಲಘಟ್ಟದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆತನು ಅಪಾಯದಿಂದ ಪಾರಾಗಿರುವನೆಂದು ವರದಿಯಾಗಿದೆ. ಆತನ ತಂದೆ ವೆಂಕಟರಾಯಪ್ಪನ ದೂರಿನ ಮೇರೆಗೆ ಶಿಡ್ಲಘಟ್ಟ ಪೋಲೀಸ್ ಠಾಣೆಯಲ್ಲಿ ಕೇಸ್ ನಂ. ೩೧೦:೮೮ನ್ನು ಸ್ಫೋಟಕ ಕಾಯಿದೆಯ ೩,೪,೫ ಮತ್ತು ಐಪಿಸಿಯ ೩೫೭ರ ಸೆಕ್ಷನ್‌ನೊಂದಿಗೆ ದಾಖಲಿಸಲಾಯಿತು.

ಈ ಘಟನೆಯ ನಂತರ ದೇಶದಪೇಟೆ ಮತ್ತು ಪಂಯೂರ ಚಿತ್ರ ಮಂದಿರದ ಬಳಿ ಕೆಲವು ಗಲಭೆಗಳು ಜರುಗಿದವು. ಉಲ್ಲೂರು ಪೇಟೆಯಲ್ಲಿ ಒಬ್ಬ ಯುವಕನು ತಿವಿತದಿಂದಾಗಿ ಮೃತಪಟ್ಟಿರುತ್ತಾನೆ. ಆತನ ದೇಹವನ್ನು ಆಸ್ಪತ್ರೆಗೆ ಒಯ್ಯಲಾಗಿದೆ. ಆತನನ್ನು ಆಂಧ್ರಪ್ರದೇಶದ ಹಿಂದೂಪುರ ವಾಸಿ, ೨೨ ವರ್ಷದ ಅನ್ವರ್ ಎಂದು ಗುರುತಿಸಲಾಗಿದೆ. ಆತನು ಕಳೆದ ೧ ವರ್ಷದಿಂದ ಶಿಡ್ಲಘಟ್ಟದ ಹಳೇ ಆಂಜೆ ಕಛೇರಿ ರಸ್ತೆಯಲ್ಲಿ ವಾಸ ಮಾಡುತ್ತಿದ್ದನು. ಆತನಿಗೆ ಶಿಡ್ಲಘಟ್ಟದಲ್ಲಿ ಒಂದು ಸಿಲ್ಕ್ ಫಿಲೇಚರ್ ಇರುತ್ತದೆ. ಆತನ ದೇಹವನ್ನು ಆತನ ಸಹೋದರ ಸಲೀಂ ಮತ್ತು ಸಿರಾಜ್, ಮುನ್ಸಿಪಲ್ ಕೌನ್ಸಿಲರ್, ಶಿಡ್ಲಘಟ್ಟ ಇವರಿಂದ ಗುರುತಿಸಲ್ಪಟ್ಟಿತು. ಈ ಘಟನೆಯಲ್ಲಿ ಗಾಯಗೊಂಡ ಎರಡೂ ಕೋಮಿಗೆ ಸೇರಿದ ೭ ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಟ್ಟರು. ಈ ೭ ಮಂದಿಯೂ ಅಪಾಯದಿಂದ ಪಾರಾಗಿರುತ್ತಾರೆ

ಈ ಘಟನೆಯಲ್ಲಿ ಎರಡೂ ಗುಂಪಿಗೆ ಸೇರಿದ ಒಟ್ಟು ೧೯ ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಘಟನೆ ನಡೆದ ತಕ್ಷಣ ಪೋಲೀಸರು ಗಲಭೆಯನ್ನು ಸ್ವಲ್ಪ ಸಮಯದಲ್ಲೇ ಹತೋಟಿಗೆ ತಂದರು. ಶಿಡ್ಲಘಟ್ಟದಲ್ಲಿ ಸಾಯಂಕಾಲ ೬ ಗಂಟೆಯಿಂದ ಮರುದಿನ ೬ ಗಂಟೆಯ ವರೆಗೆ ಕರ್ಫ್ಯೂವನ್ನು ವಿಧಿಸಲಾಗಿತ್ತು. ಈ ಸಂಬಂಧದಲ್ಲಿ ಸೆಕ್ಷನ್ ೧೪೪ ೧೪೭ ೧೪೮ ೩೨೪ ೩೩೨ ಐಪಿಸಿ ಯನ್ವಯ ಕ್ರೈಂ ನಂ. ೩೧೦:೮೮ನ್ನು ಸಬ್ ಇನ್ಸ್‌ಪೆಕ್ಟರ್‌ರವರ ದೂರಿನನ್ವಯ ಒಂದು ದೊಂಬಿ ಪ್ರಕರಣ ನೋಂದಾಯಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಗಬ್ಬೆ, ದೊಂಬಿ ಮತ್ತು ಹಾನಿಗೆ ಸಂಬಂಧಿಸಿದಂತೆ ಎರಡೂ ಕೋಮಿನವರ ವಿರುದ್ಧ ಇನ್ನೂ ೮ ಕೇಸುಗಳನ್ನು ದಾಖಲು ಮಾಡಲಾಗಿದೆ. ಈ ಕೇಸುಗಳು ತನಿಖೆಯಲ್ಲಿವೆ.

ಕೇಂದ್ರ ವಲಯದ ಡಿಐಜಿಪಿ, ಸಾಕಷ್ಟು ಸಿಬ್ಬಂದಿಯೊಂದಿಗೆ ೪ ಪೋಲೀಸ್ ಇನ್ಸ್‌ಪೆಕ್ಟರ್, ೯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ೫ ಪ್ಲಟೂನ್ ಕೆಎಸ್ಆರ್‌ಪಿ ಮತ್ತು ೪ ಪ್ಲಟೂನ್ ಡಿಎಆರ್

ಸಿಬ್ಬಂದಿಗಳು ಬಂದೋಬಸ್ತ್ ಕರ್ತವ್ಯದಲ್ಲಿದ್ದಾರೆ. ಜಿಲ್ಲೆಯ ಎಲ್ಲಾ ಅಧಿಕಾರಿಗಳಿಗೂ ಹಾಗೂ ನೆರೆಯ ಜಿಲ್ಲೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಕೋಲಾರ ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರದ ಉಪ ವಿಭಾಗಾಧಿಕಾರಿಗಳೊಡನೆ ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದಾರೆ. ತೀವ್ರ ಪೋಲೀಸ್ ಗಸ್ತನ್ನು ಏರ್ಪಡಿಸಿದೆ. ನಂತರ ಗಲಭೆ ಮರುಕಳಿಸಿಲ್ಲ.

ದಿನಾಂಕ ೬–೬–೮೮ರಂದು ಮುಖ್ಯಮಂತ್ರಿಗಳು ತಮ್ಮ ಕಛೇರಿಯಲ್ಲಿ ಗೃಹ ಆಯುಕ್ತರು, ಡಿಜಿ ಮತ್ತು ಐಜಿಪಿ, ಮತ್ತು ಇತರ ಹಿರಿಯ ಪೋಲೀಸ್ ಅಧಿಕಾರಿಗಳು, ಲೋಕ ಸಭಾ ಸದಸ್ಯರು ಮತ್ತು ಸ್ಥಳೀಯ ಶಾಸಕರು ಇವರೊಂದಿಗೆ ಶಿಡ್ಲಘಟ್ಟದಲ್ಲಿ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಪುನರಾವಲೋಕನ ಮಾಡಿ ಅಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ತಿಳಿಯಾಗಿಸಲು ಹೆಚ್ಚಿನ ಪೋಲೀಸ್ ಬಂದೋಬಸ್ತ್ ಮಾಡಲು ತಿಳಿಸಿದರು. ಅದರಂತೆ ಅಲ್ಲಿ ದುಷ್ಕರ್ಮದಲ್ಲಿ ತೊಡಗಿರುವ ಎಲ್ಲರನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡು ಮುನ್ನೆಚ್ಚರಿಕೆ ಕ್ರಮವಾಗಿ ಶಾಂತಿ ಕಾಪಾಡಲು ತಿಳಿಸಲಾಯಿತು ಮತ್ತು ಹೆಚ್ಚಿನ ಪೋಲೀಸ್ ಪಹರೆಗಳನ್ನು ಕೋಮು ಗಲಭೆಗಳಿಗೆ ಅವಕಾಶವಿರುವ ಎಲ್ಲಾ ಸೂಕ್ಷ್ಮ ಸ್ಥಳಗಳಲ್ಲಿ ಹಾಕಲು ಮತ್ತು ಸ್ಥಳೀಯ ಮುಖಂಡರ ಜತೆ ಶಾಂತಿ ಸಭೆ ನಡೆಸಲು ತಿಳಿಸಿದರು. ಇತರೆ ಇಲಾಖೆಗಳ ಕೆಲವು ಜೀಪುಗಳನ್ನು ಸಹ ಬಂದೊಬಸ್ತಿಗೆ ಬಳಸಲಾಯಿತು. ಈಗ ಪರಿಸ್ಥಿತಿಯು ಪೂರ್ಣಹತೋಟಿಯಲ್ಲಿರುತ್ತದೆ. ಶಿಡ್ಲಘಟ್ಟ ಪೋಲೀಸ್ ಠಾಣೆಯಲ್ಲಿರುವ ಗೂಂಡಾ ಮತ್ತು ಸಮಾಜ ಘಾತುಕರ ಪಟ್ಟಿಯನ್ನು ಪುನರ್ಪರಿಶೀಲಿಸಿ ಇತ್ತೀಚೆಗೆ ಕೋಮು ಗಲಭೆಗಳಲ್ಲಿ ತೊಡಗಿರುವವರ ಪಟ್ಟಿಯನ್ನು ತಯಾರಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ. ಅದರಂತೆ ಈಗಿರುವ ಶಾಂತಿ ಸಮಿತಿ ಸದಸ್ಯರ ಜತೆಗೆ ಅಲ್ಲಿನ ಇನ್ನೂ ಬೇರೆ ಮುಖಂಡರನ್ನು ಸೇರಿಸಿ ಶಾಂತಿ ಸಮಿತಿಗಳನ್ನು ಪುನರ್ರಚಿಸಲಾಗುವುದು, ಡಿ.ಜಿ.ಪಿ ಯವರು ಸ್ಥಳಕ್ಕೆ ಈ ದಿನ ಭೇಟಿ ನೀಡಿ ಪರಿಸ್ಥಿತಿಯನ್ನು ಪತೋಟಿಗೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಕೋಮು ಗಲಭೆಗಳನ್ನು ತಡೆಗಟ್ಟಲು ಕೋಲಾರ ಜಿಲ್ಲೆಯ ಎಲ್ಲಾ ಆಡಳಿತ ಯಂತ್ರಗಳನ್ನು ಚುರುಕುಗೊಳಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—೨೮ ನೇ ತಾರೀಖು ನಾನು ಅಲ್ಲಿಗೆ ಹೋಗಿದ್ದೆ. ೫ನೇ ತಾರೀಖು ಮಂತ್ರೊಬ್ಬರು ಸತ್ತಿದ್ದಾರೆ, ಇಬ್ಬರಿಗೆ ಗಾಯಗಳಾಗಿದೆ ೩೫ ಸಾವಿರ ಜನರಿರುವ ಊರಿನಲ್ಲಿ ೧೫ ಸಾವಿರ ಜನರು ಊರು ಬಿಟ್ಟಿದ್ದಾರೆ. ಅಲ್ಲಿ ಜನರಿಗೆ ಸರಿಯಾದ ರೀತಿಯಲ್ಲಿ ರಕ್ಷಣೆ ಕೊಡುತ್ತಿಲ್ಲ. ಗೂಂಡಾಗಳ ಪಟ್ಟಿ ಪೋಲೀಸರ ಕೈಯ್ಯಲ್ಲಿ ಇದೆ ಆದರೂ ಕೊಡ ಗೂಂಡಾ ಆಕ್ಟ್ ಪ್ರಕಾರ ಅವರನ್ನು ಏಕೆ ಅರೆಸ್ಟ್ ಮಾಡಲಿಲ್ಲ. ಸ್ಥಳೀಯ ಶಾಸಕರು ಅಲ್ಲಿಗೆ ಹೋದಾಗ ಸರಿಯಾಗಿ ಘಂಟ್ಟನ್ ಮಾಡುವುದಕ್ಕೆ ಬಿಡುತ್ತಿಲ್ಲ, ಅಂತಹ ಪರಿಸ್ಥಿತಿ ಇದೆ ಶಾಸಕರ ಮೇಲೆ ಅಲ್ಲಿ ಹಲ್ಲೆ ಮಾಡಿದ್ದರೂ ಕೂಡ ಸೂಕ್ತ ಪರಿಹಾರವನ್ನು ಅಲ್ಲಿ ಒದಗಿಸದೇ ಈ ರೀತಿ ಬಿಟ್ಟರೆ ನಾಗರಿಕ ಸಮಾಜದಲ್ಲಿ ನಾವು ಇರುವುದು ಹೇಗೆ ? ಇದೇ ರೀತಿ ಬಿಟ್ಟಿದ್ದೇ ಆದರೆ ಇಂತಹ ಘಟನೆಗಳು ಬೇರೆ ಕಡೆ ಹರಡುವ ಸಂಭವ ಕೂಡ ಇದೆ. ಸೆಕ್ಷನ್ ೩೨೪ ಐ ಪಿ ಸಿ ಯನ್ವಯ ಕ್ರೈ ನಂ. ೩೨೨/೮೮ ಅನ್ನು ಒಂದು ದೊಂಬಿ ಪ್ರಕರಣವೆಂದು ನೊಂದಾಯಿಸಿಕೊಂಡಂ ತನಿಪೆ ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ. ಕೇಸ್ ಹಾಕಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೀರಿ. ನ್ಯಾಯವಾಗಿ ಯಾರು ಇದಕ್ಕೆ ಅಪ್ರೋಚ್ ಮಾಡುತ್ತಿದ್ದಾರೆ ಅವರಿಗೆ ಶಿಕ್ಷೆ ನೀಡಬೇಕು. ಅವರು ಈಗಲೂ ಕೂಡ ದೊಡ್ಡ ಮನುಷ್ಯರ ಸೋಗಿನಲ್ಲಿ ಓಡಾಡುತ್ತಿದ್ದಾರೆ. ಮಳ್ಳೂರಿನಲ್ಲಿನ ಜನಗಳನ್ನು ಕೂಡ ಅರೆಸ್ಟ್ ಮಾಡಿ ಕೊಂಡು ಹೋಗಿದ್ದಾರೆ. ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗುತ್ತೇವೆ ಎಂದು ಹಿಂದೆ ತಾವು ಒಪ್ಪಿಕೊಂಡಿದ್ದೀರಿ ತಾವು ಕೂಡ ಅಲ್ಲಿಗೆ ಹೋಗಿ ನೋಡಿ ಎಂದು ನಾನು ಹೇಳಿದೆ ಆದರೆ ಯಾವ ಕಾರಣಕ್ಕೋ ತಾವು ಹೋಗಲಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ ಅಲ್ಲಿ ಗಲಭೆ ಹಬ್ಬುವ ಚಾನ್ಸಸ್ ಹೆಚ್ಚುತ್ತದೆ. ಎಲ್ಲಾ ಪಾರ್ಟಿಗಳ ಮುಖಂಡರನ್ನು ಅಲ್ಲಿಗೆ ಕಳುಸುವುದು ಮುಖ್ಯವಾದುದು. ಕಾಂಗ್ರೆಸ್ ನಾಯಕರು, ಜನತಾ ನಾಯಕರು ನವ್ಯ ಪಾರ್ಟಿಯವರು ಎಲ್ಲರೂ ಅಲ್ಲಿಗೆ ಹೋಗಿ ಅಲ್ಲಿ ಶಾಂತಿ ಮಾಡಿಸಲು ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಶಿಡ್ಲಘಟ್ಟ ಒಂದೇ ಅಲ್ಲ ಬೇರೆ ಕಡೆಗಳಲ್ಲಿ ಇದು ಹರಡುವ ಸಂಭವ ಇದೆ.

ಈಗ ಅಲ್ಲಿ ಪಕ್ಕದ ಮಾರ್ಕೆಟ್‌ನಲ್ಲಿ ೮೦ ರೂಪಾಯಿ ಒಂದು ಕೆ. ಜಿ. ರೇಷ್ಮೆ ಗೂಡು ಇದ್ದದ್ದು ಈ ಗಲಾಟೆಯಿಂದಾಗಿ ೬೮–೪೦ ರೂಪಾಯಿಗೆ ಇಳಿದಿದೆ. ಶಿಡ್ಲಘಟ್ಟದಲ್ಲಿ ೧೫ ಸಾವಿರ ಜನರಿಗೆ ಕೆಲಸ ಇಲ್ಲದ ಹಾಗೆ ಆಗಿದೆ. ಆದ್ದರಿಂದ ತಕ್ಷಣ ಈ ಗಲಭೆಗೆ ಕಾರಣವಾದ ನಿಜವಾದ ಗೂಂಡಾಗಳು ಯಾರ್ಯಾರು

ಇದ್ದಾರೆ, ಅವರು ಯಾವ ಕೋಮಿನವರೇ ಆಗಿರಲಿ, ಯಾವ ಪಾರ್ಟಿಯವರೇ ಆಗಿರಲಿ ಅವರನ್ನು ಬಲಿ ಹಾಕೆಂತ್ತೀರಾ ? ಅವರನ್ನು ಗಡಿಪಾರು ಮಾಡುತ್ತೀರಾ ? ಇಲ್ಲದೇ ಇದ್ದರೇ ಈ ಗಲಭೆಯನ್ನು ಹಾಗೆಯೇ ಕಂಟಿನ್ಯೂ ಆಗಲಿಕ್ಕೆ ಬಿಡುತ್ತೀರಾ? ಏಪ್ರಿಲ್ ಮೂರನೇ ತಾರೀಖಿನಿಂದ ಕಂಟಿನ್ಯೂಯಸ್ ಆಗಿ ಇವತ್ತಿಯವರೆಗೂ ಈ ಗಲಭೆ ಜರುಗುತ್ತಿದೆ. ಇದೇನು ನಾಗರೀಕ ಸಮಾಜವೇ ? ಇದನ್ನು ಏನೆಂದುಕೊಳ್ಳುವುದು ? ಇವತ್ತು ಅಲ್ಲಿ ೧೫ ಸಾವಿರ ಜನ ಊರನ್ನು ಬಿಟ್ಟಿದ್ದಾರೆ. ಹೇಳಿದ್ದನ್ನೇ ಏತಕ್ಕೆ ಹೇಳುತ್ತಿದ್ದೇನೆಂದರೆ. ಅವರ ಮನಸ್ಸಿಗೆ ತಟ್ಟಲಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ, ತಾವು ಕೇಳಿ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಈ ಶಿಡ್ಲಘಟ್ಟ ಗಲಭೆ ವಿಷಯದಲ್ಲಿ ಈಗಾಗಲೇ ಒಂದು ಸಲ ಸಭೆಯಲ್ಲಿ ತೀವ್ರವಾಗಿ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಏನೆಂದರೆ, ಈ ಗಲಭೆ ಆಗದಂಥ ರೀತಿಯಲ್ಲಿ ತಡೆಯುವುದಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆಗಳನ್ನೂ ಕೈಗೊಳ್ಳುತ್ತೇವೆ ಮತ್ತು ಅವರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಅವುಗೆ ತಕ್ಕ ಶಿಕ್ಷೆಯನ್ನು ಕೊಡಿಸ ತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದ್ದರು ಈಗ ಮತ್ತೆ ಐದನೇ ತಾರೀಖು ನಡೆದಿದೆ. ನಾವು ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಿ ೧೫ ದಿವಸಗಳು ಆಗಿರಲಿಕ್ಕಿಲ್ಲ. ಅಷ್ಟರಲ್ಲಿಯೇ ಮತ್ತೆ ಪುನಹ ಈ ಘಟನೆಗಳು ನಡೆಯುತ್ತಿವೆ. ಈಗ ಎಲ್ಲಿ ನೋಡಿದರೂ ಕೂಡಾ ಬಾಂಬ್ ಎಂದು ಹೇಳುತ್ತಾರೆ. ಈ ಬಾಂಬ್ ಎನ್ನುವುದು ಒಂದು ಸಣ್ಣ ಹುಡುಗರ ಕೈಯಲ್ಲಿ ಗೋಲಿ ಎನ್ನುವ ಹಾಗೆ ಎಲ್ಲಾ ಕಡೆಗೂ ಈ ಬಾಂಬ್‌ನ ಪಾಳಿ ಜಾಸ್ತಿಯಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದ ಕೈಯಿಂದ ಸಾಧ್ಯವಾಗುತ್ತಿಲ್ಲವೇ ? ಈ ಅಧಿಕಾರಿಗಳು ಕೂಡಾ ಏನು ಕ್ರಮಕೈಗೊಂಡಿದ್ದಾರೆ ? ಏನು ಕ್ರಮ ಕೈಗೊಳ್ಳುತ್ತಾರೆ ಎನ್ನುತಕ್ಕಂಥದ್ದು ಬಹಳ ಮುಖ್ಯ. ಏಕೆಂದರೆ ಇಲ್ಲಿ ಎಲ್ಲಿ ನೋಡಿದರೂ ಬಾಂಬ್ ಎಸೆದರು. ಅಲ್ಲಿ ಗಲಭೆ ಆಯಿತು ಅಲ್ಲಿ ಬಾಂಬ್ ಎಸೆದರು. ಇಲ್ಲಿ ಬಾಂಬ್ ಎಸೆದರು, ಎನ್ನುವ ಒಂದು ಪುಕಾರನ್ನು ನಾವು ಕೇಳುತ್ತಿದ್ದೇವೆ. ಇದರಿಂದ ಅನೇಕ ಅನಾಹುತಗಳು ಕೂಡಾ ಆಗುತ್ತಿವೆ. ಅದೇ ರೀತಿ ಶಿಡ್ಲಘಟ್ಟದಲ್ಲಿ ಐದನೇ ತಾರೀಖು ೪-೫೧ ಗಂಟೆಯಲ್ಲಿ ಒಂದು ಬಾಂಬನ್ನು ಹಾಕಿದ್ದಾರೆ, ಇದರಿಂದ ಪರ್ವೀನ ಹುಡುಗ ತಾಯಿ ಜೊಜೆ ಹೋಗುತ್ತಿದ್ದಾಗ ಕಾಲಿಗೆ ಪೆಟ್ಟು ಬಿದ್ದಿದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಿಜವಾಗಲೂ ಕೂಡಾ ನಮ್ಮ ಸರ್ಕಾರ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಇಂಥ ಆಯುಧಗಳನ್ನು ತಯಾರು ಮಾಡತಕ್ಕಂಥವರ ಮೇಲೆ ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಅಂಥ ಶಕ್ತಿಗಳಿಗೆ ಸರಿಯಾದಂಥ ಶಿಕ್ಷೆಯನ್ನು ಕೊಡಬೇಕು. ಇಲ್ಲದೇ ಇದ್ದರೆ ಹೀಗೆ ಇದು ಹೆಚ್ಚಾಗಿ ಕೊನೆಗೆ ಇದು ಯಾವ ಕಡೆಗೆ ಮುಟ್ಟುತ್ತದೆಯೇ ಗೊತ್ತಿಲ್ಲ. ಆದ್ದರಿಂದ ತಾವು ಇದನ್ನು ಮೊದಲು ತಡೆಯಬೇಕು. ಆಮೇಲೆ ನಿಜವಾಗಲೂ ನಮ್ಮಲ್ಲಿ ಕೋಮಿನ ಗಲಭೆ ಆಗಬಾರದು. ನಾವು ವಿಶ್ವಶಾಂತಿಯನ್ನು ಬಯಸತಕ್ಕಂಥ ಜನ, ನಮ್ಮಲ್ಲಿ ಈ ಒಂದು ಕೋಮಿನ ಗಲಭೆಗಳನ್ನು ಹಬ್ಬಿಸತಕ್ಕಂಥ ವ್ಯಕ್ತಿಗಳು. ಆ ವ್ಯಕ್ತಿಗಳು ಬಹಳ ಜನ ಇರಲಿಕ್ಕೆ ಸಾಧ್ಯ ಇಲ್ಲ. ಯಾರೋ ಕೆಲವು ಜನ ಇರುತ್ತಾರೆ. ಅಂಥ ಜನ ಯಾರು ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಕೂಡಾ ಸರ್ಕಾರ ತೀವ್ರವಾಗಿ ಪ್ರಯತ್ನ ಮಾಡಬೇಕು. ಏಕೆಂದರೆ ಈ ಕೋಮು ಗಲಭೆಯಲ್ಲಿ ಮುಖ್ಯವಾಗಿ ತೊಂದರೆಗೆ ಒಳಗಾಗತಕ್ಕಂಥ ಜನ ಸಾಮಾನ್ಯ ಜನ ಬಡವರು. ಅವರು ಹಿಂದೂಗಳು ಆಗಿರಬಹುದು, ಮುಸ್ಲಿಂ ಆಗಿರಬಹುದು. ಮತ್ತಿತರ ಜನಾಂಗಕ್ಕೆ ಸೇರಿದವರಾಗಿರಬಹುದು. ಸಾಮಾನ್ಯ ಜನ ತೊಂದರೆಗೆ ಈಡಾಗುತ್ತಾರೆ. ಇದರಿಂದ ಕೆಲವರು ಮನೆ ಮತಗಳನ್ನು ಕಳೆದುಕೊಳ್ಳುತ್ತಾರೆ, ಕೆಲವರು ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ. ಅನೇಕ ಜನ ಇದರಿಂದ ಹಿಂಸೆಗೆ ಒಳಗಾಗುತ್ತಾರೆ. ನಮ್ಮ ವೆಂಕಟರಾಮಯ್ಯನವರು ಹೇಳಿದಂತೆ ಈಗ ಸುಖವಾಗಿರುವವರು ಮನೆಯಲ್ಲಿದ್ದಾರೆ ಕೆಲಸ ಇಲ್ಲದೇ ದಿನನಿತ್ಯ ದುಡಿದು ಜೀವನ ಮಾಡತಕ್ಕಂಥ ಅವರಿಗೆ ಇವತ್ತಿನ ದಿವಸ ಕೆಲಸ ಇಲ್ಲ. ಇವತ್ತಿನ ಊಟಕ್ಕೆ ಇಲ್ಲ. ಇಂಥ ಜನರ ಸ್ಥಿತಿ ಬಹಳ ಶೋಚನೀಯವಾಗಿರುತ್ತದೆ. ಇಂಥ ಕೋಮು ಘರ್ಷಣೆಗಳು ಉಂಟಾದಂಥ ಸಂದರ್ಭದಲ್ಲಿ ಬಹಳ ಕಷ್ಟಕ್ಕೆ ಒಳಪಡಬೇಕಾದಂಥ ಒಂದು ಪ್ರಸಂಗ ಬರುತ್ತದೆ: ಇವತ್ತು ಅಲ್ಲಿ ಗಲಭೆ ಆಗಬಹುದು. ಅದನ್ನು ಕಡಿಮೆ ಮಾಡುವುದಕ್ಕೆ ಕರ್ಫ್ಯೂ ವಿಧಿಸಬಹುದು, ಅಲ್ಲಿ ಯಾರೂ ಬಾರದಂತೆ ತಡೆಯಬಹುದು, ಆದರೆ ಈ ದಿವಸ ದುಡಿದು ಆ ದಿವಸವೇ ತಂದು ಜೀವನ ಮಾಡತಕ್ಕಂಥ ಜನ ಇವತ್ತು ಯಾವ ರೀತಿ ಜೀವನ ಮಾಡಬೇಕು ಎನ್ನುವುದನ್ನು ನಾವು ಕೂಡಾ ವಿಚಾರ ಮಾಡಬೇಕಾಗುತ್ತದೆ.

ಆದ್ದರಿಂದ ಇಂತಹ ಕೋಮುವಾರು ಘರ್ಷಣೆಯನ್ನು ತಡೆಗಟ್ಟಬೇಕೆಂದು ಹಿಂದೆಯೇ ಹೇಳಿದ್ದೆ. ಅಲ್ಲಿಗೆ ಎಲ್ಲಾ ಪಕ್ಷಗಳ ಸದಸ್ಯರನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡೋಣ, ಅಲ್ಲಿ ಕೋಮುವಾರು ಘರ್ಷಣೆಯನ್ನು ತಡೆಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡೋಣ. ಹಿಂದೆ ತೊಂದರೆಗೆ ಒಳಪಟ್ಟಂತಹ ಜನರಿಗೆ ಏನು ಪರಿಹಾರ ಕೊಟ್ಟರು, ಹಿಂದೆ ಅನೇಕ ಅಂಗಡಿಗಳು, ಮನೆಗಳು ಎಲ್ಲಾ ನಾಶವಾಗಿವೆ. ಆ ಜನರಿಗೆ ಏನು ಪರಿಹಾರ ಸಿಕ್ಕಿತು. ಈಗ ಸತ್ತವರಿಗೆ ಕಟುಂಬದವರಿಗೆ ಏನು ಪರಿಹಾರ ಒದಗಿಸಲಿದ್ದೀರಿ ಮತ್ತು ಗಾಯಗೊಂಡವರಿಗೆ ಚಿಕಿತ್ಸೆಗೆಂದು ಏನು ಪರಿಹಾರ ಒದಗಿಸಿದ್ದೀರಿ. ಈ ಎಲ್ಲಾ ವಿಷಯಗಳನ್ನು ಅರಿತುಕೊಂಡು ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾದ ವಿವರಣೆಯನ್ನು ಕೊಟ್ಟರೆ ಒಳ್ಳೆಯದೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ, ಕೋಮುವಾರು ಗಲಭೆಯನ್ನು ಸದನದಲ್ಲಿ ನಾವು ಪ್ರಸ್ತಾಪ ಮಾಡುವಾಗ ಗಂಭೀರವಾಗಿ ಅದನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳೊಡನೆ ಸಾಮಾಲೋಚನೆ ಮಾಡಿ ಪರಿಹಾರಕ್ಕೋಸ್ಕರ ಸೂಚನೆಗಳನ್ನು ಕೊಟ್ಟರೆ ಪಾಸಿಯೇ ಹೊರತು ನಾವು ಸದಸ್ಯರು ಸದನದಲ್ಲಿ ಕೇವಲ ಆಧಾರ ರಹಿತವಾದ ಅಂಕಿಅಂಶಗಳನ್ನು ಕೊಟ್ಟರೆ, ಅದು ಕೇವಲ ಪ್ರಚಾರಕ್ಕಾಗಿ ಬಂದರೆ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ನಿನ್ನೆದಿವಸ ವೆಂಕಟರಾಮಯ್ಯನವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಗಳನ್ನು ಕೊಟ್ಟರು. ಎಲ್ಲಾ ವಿರೋಧ ಪಕ್ಷದ ಸದಸ್ಯರೆಲ್ಲರೂ ಚರ್ಚೆ ಮಾಡಿ ಇದಕ್ಕೆ ಪರಿಹಾರ ಕಂಡು ಹಿಡಿಯುವುದು ಪಾಸಿ ಹೊರತು, ಕೇವಲ ಆಧಾರ ರಹಿತವಾದ ಅಂಕಿ ಅಂಶಗಳಿಂದ ೧೫ ಸಾವಿರ ಜನ ಬೇರೆ ಕಡೆ ಹೋಗಿದ್ದಾರೆ ಇತ್ಯಾದಿಯಾಗಿ ಸದನದಲ್ಲಿ ಪ್ರಸ್ತಾಪವಾದರೆ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಪರಿಸ್ಥಿತಿಯು ಪರಿಹಾರದ ಬದಲು ಅದು ಇನ್ನೂ ಬಿಗಡಾಯಿಸುತ್ತದೆ. ಆದುದರಿಂದ ಯಾರೂ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬಾರದೆಂದು ಹೇಳುತ್ತೇನೆ. ಅದು ನನ್ನ ಮಾನವಿ ಕೂಡ. ಮೊನ್ನೆ ರೆವಿನ್ಯೂ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಈ ವಿಷಯದ ಬಗ್ಗೆ ಸರ್ವ ಸದಸ್ಯರ ನಿಯೋಗ ಹೋಗಿ ಶಾಂತಿ ಸಮಿತಿಯ ಮುಖಾಂತರ ಶಾಂತ ವಾತಾವರಣ ನಿರ್ಮಾಣಕ್ಕೆ ಸಮಾಧಾನ ಮಾಡುವ ಪ್ರಯತ್ನ ಮಾಡೋಣವೆಂದು ತಿಳಿಸಿದ್ದಾರೆ. ಇಲ್ಲಿ ಮಾನ್ಯ ವೆಂಕಟರಾಮಯ್ಯನವರು ಇದ್ದಾರೆ, ಮಾನ್ಯ ಮೊಯಿಲಿಯವರು ಇದ್ದಾರೆ. ಎಲ್ಲರೂ ಸೇರಿ ಇದರ ಬಗ್ಗೆ ಪ್ರಯತ್ನ ಮಾಡೋಣ. ಮುಖ್ಯವಾಗಿ ಇಲ್ಲಿ ಅಂಕಿ ಅಂಶಗಳನ್ನು ಕೊಡುವಾಗ ಜವಾಬ್ದಾರಿ ಇರಬೇಕು ಎಂದು ಎಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೇ ನಾನು ನನ್ನ ಕಛೇರಿಯಲ್ಲಿ ನಮ್ಮ ಹೋಮ್ ಸೆಕ್ರೆಟರಿ ಮತ್ತು ಪೋಲೀಸ್ ಖಾತೆಯ ಹಿರಿಯ ಅಧಿಕಾರಿಗಳು, ಎಲ್ಲಾ ಶಾಸಕರು, ಕೋಲಾರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯಿಂದ ಆರಿಸಿ ಹೋದಂತಹ ಲೋಕ ಸಭಾ ಸದಸ್ಯರು ಇವರ ಜೊತೆ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇನೆ. ಅಲ್ಲಿ ಯಾವ ಯಾವ ವಿಷಯ ಚರ್ಚೆ ಮಾಡಿದ್ದೇವೆ, ಅಲ್ಲಿ ಏನು ಸಲಹೆ ಸೂಚನೆಗಳು ಬಂದಿವೆ, ಎಂಬುದು ಮಾನ್ಯ ವೆಂಕಟರಾಮಯ್ಯನವರಿಗೆ ಗೊತ್ತಿದೆ. ಈಗ ಸತತವಾಗಿ ಮಾನ್ಯ ಪಂಪಾಪತಿಯವರು ಒಂದು ಮಾತನ್ನು ಹೇಳಿದರು. ಕಳೆದ ಆನೇಕ ಸಲದಿಂದ ಸತತವಾಗಿ ಇಂತಹ ಘಟನೆಗಳು ನಡೆಯುತ್ತಿವೆ ಎಂದು, ಆದರೆ ಸತತವಾಗಿ ನಡೆಯುತ್ತಿಲ್ಲ, ಸುದೈವದಿಂದ ಮೊನ್ನೆಯವರೆಗೆ ಪುನಃ ಇಂತಹ ಘಟನೆ ಆಗುತ್ತದೆ ಎನ್ನುವ ಅನುಮಾನ ಕೂಡ ಇರಲಿಲ್ಲ. ಅಲ್ಲಿ ಶಾಂತಿ ಸಮಿತಿಯನ್ನು ಮಾಡಿದ್ದೇವೆ. ಸ್ಥಾನೀಕ ಶಾಸಕರು ಹಗಲೂ ರಾತ್ರಿ ಇದರ ಬಗ್ಗೆ ಪರಿಶ್ರಮ ವಹಿಸಿದ್ದಾರೆ. ಎರಡೂ ಕೋಮುಗಳಲ್ಲಿ ಪರಸ್ಪರ ವಿಶ್ವಾಸ ಮೂಡಬೇಕು. ಪರಸ್ಪರ ಬಂಧು-ಭಾವನೆ ಬೆಳೆಯಬೇಕು ಎಂಬ ಉದ್ದೇಶದಿಂದ ಕೆಲಸ ಮಾಡಿದ್ದಾರೆ. ಆದರೂ ಸಹ ಮೊನ್ನೆ ಸಣ್ಣ ಘಟನೆ ನಡೆಯಿತು ಇದು ಬಾಂಬ್ ಅಲ್ಲ; ಮಾನ್ಯ ಪಂಪಾಪತಿಯವರು ಹೇಳಿದಂತೆ ಇದು ಬಾಂಬ್ ಎಸೆತ ಅಲ್ಲ. ಇದು ಕೇವಲ ಸ್ಫೋಟಕ ಮಾತ್ರ. ನಾನು ಅಲ್ಲಿನ ಪೋಲೀಸ್ ಅಧಿಕಾರಿಗಳಿಗೆ ಆದೇಶವನ್ನು ನೀಡಿದ್ದೆ. ಯಾರ ಮನೆಗಳಲ್ಲಿ ಅವರು ಹಿಂದೂಗಳೇ ಆಗಿರಲಿ, ಮುಸ್ಲೀಮರೇ ಆಗಿರಲಿ, ಅಥವಾ ಇನ್ನಾವುದೇ ಗುಂಪಿನವರಿರಲಿ, ಅವರ ಮನೆಯಲ್ಲಿ ಸ್ಫೋಟಕ ವಸ್ತುಗಳು ಇದ್ದರೆ ಅದನ್ನು ವಶಪಡಿಸಿಕೊಳ್ಳಿ ಎಂದು. ಸುಮಾರು ೬೦ ಮನೆಗಳನ್ನು ಅವರು ಶೋಧಿಸಿದ್ದಾರೆ. ಸ್ಫೋಟಕ ವಸ್ತುಗಳನ್ನು ಹಾಕಿದ್ದರಿಂದ ಶಾಂತವಾಗಿರತಕ್ಕ ಪರಿಸ್ಥಿತಿ ಮತ್ತಷ್ಟು ಪ್ರಕ್ಷುಬ್ಧ ಆಯಿತು. ಇದರಲ್ಲಿ ಒಬ್ಬ ಹುಡುಗನ ಕೊಲೆ

ಆಯಿತಂ. ನಿನ್ನೆದಿನದ ಘಟನೆಯಲ್ಲಿ ಮುಖ್ಯವಾದ ಅಂಶ ಏನೆಂದರೆ, ಇಂತಹ ಘಟನೆಗಳು ನಡೆದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರೇ ವೈಯಕ್ತಿಕ ಜವಾಬ್ದಾರರಂ ಆಗಿರುತ್ತಾರೆ ಎಂದು ನಿನ್ನೆ ಹೇಳಿದ್ದೆ. ಇಂದೂ ಅವರಿಗೆ ಈ ಘಟನೆಗಳ ಬಗ್ಗೆ ಎಚ್ಚರಿಕೆ ಕೊಟ್ಟಿದ್ದೇನೆ. ಕೋಮುವಾರು ಗಲಭೆ ಮುಂದೆ ಪುನಃ ನಡೆದರೆ ಅವರೇ ಅದಕ್ಕೆ ಜವಾಬ್ದಾರರಾಗಿರುತ್ತಾರೆ. ಪೋಲೀಸ್ ಅಧಿಕಾರಿಗಳ ವರ್ತನೆಯಲ್ಲಿ ಏನಾದರೂ ಅದಕ್ಷತೆ ಇದ್ದರೆ ಅಥವಾ ಅವರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆಯನ್ನು ತೋರಿಸಿದ್ದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲು ಏಫಲರಾಗುವುದಿಲ್ಲ, ಅಂತಹವರ ಮೇಲೆ ಅತ್ಯಂತ ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಿನ್ನೆ ಹೇಳಿದ್ದೇನೆ.

೧೨ ೩೦ ಪಿ.ಎಂ.

ಮತ್ತೆ ಕಳೆದ ೩ ವರ್ಷಗಳಿಂದ ಅಲ್ಲಿರುವಂತಹ ಪೋಲೀಸರನ್ನು, ಅವರು ಕಾನ್ಸ್‌ಟೇಬಲ್ಸ್ ಆಗಿರಲಿ, ಹೆಡ್‌ಕಾನ್ಸ್‌ಟೇಬಲ್ಸ್ ಆಗಿರಲಿ ಎಲ್ಲರನ್ನೂ ಅಲ್ಲಿಂದ ತಕ್ಷಣ ವರ್ಗ ಮಾಡಬೇಕೆಂದು ಹೇಳಿದ್ದೇವೆ. ಮತ್ತೆ ಯಾವ ಪೋಲೀಸ್ ಅಧಿಕಾರಿ ಆ ಪ್ರದೇಶದ ಕಕ್ಷೆಯಲ್ಲಿ ಬರುತ್ತಾರೋ, ಆ ಅಧಿಕಾರಿಯನ್ನು ವರ್ಗ ಮಾಡಿದ್ದೇವೆ. ಏಕೆಂದರೆ, ಆ ಅಧಿಕಾರಿ ಈ ಘಟನೆ ನಡೆದ ದಿವಸ ಅಲ್ಲಿರಲಿಲ್ಲ. ಆ ದಿನ ಅವರು ಬೆಂಗಳೂರಿನಲ್ಲಿದ್ದರೆಂಬ ಸಮಾಚಾರ ನಮಗೆ ಗೊತ್ತಾಯಿತು. ಇದು ಆದಮೇಲೆ ಅಲ್ಲಿ ಶಾಂತಿ ಸಮಿತಿ ಮತ್ತು ಇಂಟಿಗ್ರೇಷನ್ ಕಮಿಟಿ ಎಂದು ಏನು ಮಾಡಿದ್ದೇವೆ, ಅವು ಹಳೆಯ ಕಮಿಟಿಗಳು ಎಂದೂ ನಮಗೆ ತಿಳಿದ ಮೇಲೆ ಹೊಸ ಕಮಿಟಿಗಳನ್ನು ರಚನೆ ಮಾಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಮತ್ತೆ ಸಮಾಜದ್ರೋಹಿಗಳನ್ನು ಮತ್ತು ಕೋಮುವಾರು ಗಲಭೆಯನ್ನುಂಟುಮಾಡತಕ್ಕ ಜನರನ್ನೂ ಗೂಂಡಾ ಲಿಸ್ಟ್‌ನಲ್ಲಿ ಸೇರಿಸಿ, ಈಗಿರತಕ್ಕಂಥ ಲಿಸ್ಟ್‌ನ್ನು ಅಪ್-ಟು-ಡೇಟ್ ಮಾಡಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ ಈ ಗೂಂಡಾ ಕಾಯಿದೆಯನ್ನು ಎಲ್ಲೆಲ್ಲಿ ಅನ್ವಯ ಮಾಡಬೇಕೋ ಅಲ್ಲೆಲ್ಲಾ ಅನ್ವಯ ಮಾಡಬೇಕೆಂದು ಹೇಳಿದ್ದೇವೆ. ಮಾನ್ಯ ವೆಂಕಟರಾಮಯ್ಯನವರ ಸಮಕ್ಷಮದಲ್ಲಿಯೇ ಈ ಎಲ್ಲ ತಿಳಿವಳಿಕೆಗಳನ್ನು ನಾನು ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ನಾವು ಇಲ್ಲಿಯವರೆಗೆ ತಳೆದುಕೊಂಡುಬಂದಂಥ ನೀತಿ ಏನೆಂದರೆ, ವಿದ್ಯಾರ್ಥಿಗಳ ವೇಷದಲ್ಲಾಗಲೀ ಕಾರ್ಮಿಕರ ವೇಷದಲ್ಲಾಗಲೀ, ರೈತರ ವೇಷದಲ್ಲಾಗಲೀ ಮತ್ತು ದಲಿತರ ವೇಷದಲ್ಲಾಗಲೀ ಪೋಲೀಸರು ಗುಂಡು ಹಾರಿಸಬಾರದು ಎಂದು. ಆದರೆ ಕೋಮುವಾದು ಗಲಭೆಗಳು ನಡೆದಾಗ, ಕೋಮುವಾರು ಭಾವನೆಗಳಿಗೆ ಪ್ರಚೋದನೆ ಉಂಟು ಮಾಡತಕ್ಕಂಥ ರೀತಿಯಲ್ಲಿ ಬರಹಗಳನ್ನು ಪತ್ರಿಕೆಗಳಲ್ಲಿ ಪ್ರಕಟ ಮಾಡಿದರೆ. ಇಂತಹ ವಿಚಾರಗಳ ಬಗ್ಗೆ ಕರಪತ್ರಗಳನ್ನು ಪ್ರಕಟಿಸಿ ಹಂಚಿಕೆ ಮಾಡಿದೆ. ಸಂಬಂಧಪಟ್ಟವರ ಮೇಲೆ ಕಠಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿದ್ದೇನೆ. ಇಂತಹ ಗಲಭೆಗಳನ್ನು ಯಾರು ಉಂಟುಮಾಡುತ್ತಾರೋ ಅಂತಹವರ ಮೇಲೆ ಗುಂಡು ಹಾರಿಸುವುದಕ್ಕೆ ಹಿಂದೆಮುಂದೆ ನೋಡಬಾರದೆಂದು ಸಹ ಹೇಳಿದ್ದೇನೆ. ಇದು ಒಂದು ಜಾತಿಯ ಇಲ್ಲವೇ ಒಂದು ಧರ್ಮದ ಪ್ರಶ್ನೆ ಅಲ್ಲ, ಇಡೀ ದೇಶದ ಇಂಟಿಗ್ರೇಷನ್ ಪ್ರಶ್ನೆ ಆಗುತ್ತದೆ. ಪರಿಹಾರ ಕೊಡುವ ವಿಚಾರದ ಬಗ್ಗೆ ಮಾನ್ಯ ಪಂಪಾಪತಿ ಅವರು ಪ್ರಸ್ತಾಪ ಮಾಡಿದರು. ಈ ಗಲಭೆಯಲ್ಲಿ ಯಾರುಯಾರು ಸಾವನ್ನೋವಿಗೆ ಈಡಾಗಿದ್ದಾರೆ, ಅಂತಹವರಿಗೆ ಪರಿಹಾರ ಕೊಟ್ಟಿದ್ದೇವೆ. ನೆನ್ನೆ ನಡೆದಂಥ ಘಟನೆಗೆ ಸಂಬಂಧಪಟ್ಟಂತೆ ನಾವು ಪರಿಹಾರ ಕೊಡುತ್ತೇವೆ. ಇಷ್ಟು ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ನಾನು ಅಲ್ಲಿಗೆ ಹೋಗಿಬರಬೇಕೆಂದು ಸೂಚನೆ ಮಾಡಿದ್ದಾರೆ. ನನ್ನೆ ಸಹ ಮಾನ್ಯ ಸದಸ್ಯರು ಸೂಚನೆ ಕೊಟ್ಟರು. ನಾನು ಅಲ್ಲಿಗೆ ಹೋಗುವುದಕ್ಕೆ ತೊಂದರೆ ಏನೂ ಇಲ್ಲ. ಆ ಜಾಗ ಇಲ್ಲಿಗೆ ಸಾವಿರಾರು ಮೈಲಿಗಳದೂರದಲ್ಲಿ ಏನೂ ಇಲ್ಲ. ಈ ಹಿಂದೆ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಈಗ ಮಾತ್ರ ಅಲ್ಲಿಗೆ ಯಾವ ಸಂದರ್ಭದಲ್ಲಿ ಹೋಗಬೇಕು ಎಂಬುದನ್ನು ಯೋಚನೆ ಮಾಡಿ ನೋಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಬರಬಾರದು ಎಂದು ಪೋಲೀಸ್ ಅಧಿಕಾರಿಗಳು ಹೇಳಿದ್ದಾರೆ. ಎಲ್ಲ ಪಕ್ಷಗಳ ಶಾಸಕರ ನಿಯೋಗವನ್ನು ಅಲ್ಲಿಗೆ ಕಳುಹಿಸಿಕೊಡಬೇಕೆಂದು ಇಲ್ಲಿ ಸಲಹೆ ಮಾಡಿದಾಗ ಅದನ್ನು ಮಾನ್ಯ ಬೊಮ್ಮಾಯಿ ಅವರು ಒಪ್ಪಿಕೊಂಡಿದ್ದರು. ಆದರೆ ಶಾಸಕರ ನಿಯೋಗವನ್ನು ಈಗ ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿಗೆ ಕಳುಹಿಸಿಕೊಡುವುದು ಬೇಡ ಎಂದೂ ಪೋಲೀಸ್ ಅಧಿಕಾರಿಗಳು ಹೇಳಿದ್ದಾರೆ. ನಾವು ಈಗ ಅಲ್ಲಿನ ಪೋಲೀಸರಿಗೆ ವೈರ್‌ಲೆಸ್ ಸೆಟ್ಟು, ವಾಕಿಟಾಕಿ, ಜೀಪು, ಮೋಟಾರ್ ಸೈಕಲ್ ಮುಂತಾದ ಸಾಧನಗಳನ್ನು ಒದಗಿಸಿದ್ದೇವೆ. ಇನ್ನೂ ಹೆಚ್ಚಿನ ಸಾಧನಗಳಂ

ಬೇಕಾದರೆ ಕೇಳಿ, ಕೊಡುತ್ತೇವೆಂದು ನಾವು ಅವರಿಗೆ ಹೇಳಿದ್ದೇವೆ. ಇವೊತ್ತು ಅಲ್ಲಿಗೆ ಡಿ.ಐ.ಜಿ. ಅವರು ಇನ್ನಿತರ ಅಧಿಕಾರಿಗಳ ಜೊತೆಗೆ ಹೋಗಿದ್ದಾರೆ. ಅವರು ಅಲ್ಲಿಂದ ಬಂದಮೇಲೆ ಏನು ವರದಿ ಕೊಡುತ್ತಾರೋ ನೋಡೋಣ. ಆದ್ದರಿಂದ ಈಗ ಮತ್ತೆ ಇದರ ಮೇಲೆ ಚರ್ಚೆ ಬೇಡ.

ಶ್ರೀ ಆರ್. ವೆಂಕಟರಾವ್ಯ. —Prevention is better than cure ಎಂಬ ಗಾದೆ ಇದೆ. ಆದ್ದರಿಂದ ತಾವು ಮುಂಜಾಗ್ರತಾ ಕ್ರಮ ತೆಗೆದುಕೊಂಡು ಇಂತಹ ಗಲಭೆ ಉಂಟು ಮಾಡತಕ್ಕಂಥ ಜನರನ್ನು ಪತ್ತೆ ಮಾಡಿ ಅವರನ್ನೆಲ್ಲಾ ಗೊಂಡಾ ಲಿಸ್ಟ್‌ನಲ್ಲಿ ಸೇರಿಸಬೇಕು. ಇಂತಹ ಸಮಾಜಘಾತುಕ ಶಕ್ತಿಗಳು ಎರಡೂ ಕಡೆ ಇದ್ದಾರೆ. ಆದ್ದರಿಂದ ಯಾರಯ್ಯಾರ ಮೇಲೆ ತಮಗೆ ಅನುಮಾನ ಬರುತ್ತದೋ ಅಂತಹವರನ್ನು ಪತ್ತೆ ಮಾಡಿ ಅವರನ್ನು ಬಲಿ ಹಾಕಬೇಕು. ಇಲ್ಲದಿದ್ದರೆ ಇಂತಹ ಪ್ರಕರಣಗಳು ಪದೇಪದೇ ನಡೆಯುತ್ತವೆ, ಆದ್ದರಿಂದ ಇಂತಹ ಜನರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು ತಾವು ಪೋಲೀಸ್‌ನವರಿಗೆ ಸೂಕ್ತ ತಿಳುವಳಿಕೆ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸಹ ನಾನು ಪೋಲೀಸರ ಜೊತೆ ಚರ್ಚೆ ಮಾಡಿದ್ದೇನೆ. ಈ ಕೋಮುವಾರು ಗಲಭೆಗೆ ಮುಖ್ಯವಾದ ಕಾರಣವೆಂದರೆ, ರೂಮರ್ ಮಾಂಗರಿಂಗ್. ಕೆಲವು ಸ್ವಾರ್ಥಿಗಳು ಇಂಥಾದ್ದನ್ನು ಹಬ್ಬಿಸುತ್ತಾರೆ. ಎಲ್ಲೋ ಒಂದು ಕಡೆ ಹೆಣ್ಣುಮಗಳ ಒಂದು ಕಿರು ಅತ್ಯಾಚಾರ ನಡೆದರೆ, ಕೆಲವರು ಅದನ್ನೇ ದೊಡ್ಡದು ಮಾಡಿ ಆ ಹೆಣ್ಣುಮಗಳ ಮುಖ, ಮೂಗು ಹಾಗೂ ಮೊಲೆಗಳನ್ನು ಕತ್ತರಿಸಿ ಹಾಕಿದ್ದಾರೆ ಎಂದು ಸದ್ದಿ ಹಬ್ಬಿಸುತ್ತಾರೆ. ಆಗ ಜನರಲ್ಲಿ ಒಂದು ರೀತಿಯ ಭಾವೋದ್ರೇಕ ಭಾವನೆ ಉಂಟಾಗುತ್ತದೆ. ಆದರದಲ್ಲಿ ಯಾವ ಸತ್ಯವೂ ಇರುವುದಿಲ್ಲ. ಆದರೂ ಇಂತಹ ಸುದ್ದಿಯನ್ನು ಹಬ್ಬಿಸುತ್ತಾರೆ. ಇಂಥಾದ್ದನ್ನು ಯಾರು ಹಬ್ಬಿಸುತ್ತಾರೆ ಮತ್ತು ಕರಪತ್ರಗಳ ಮೂಲಕ ಯಾರು ಇಂತಹ ಸುದ್ದಿಗಳನ್ನು ಪ್ರಚಾರ ಮಾಡುತ್ತಾರೆ ಅಂತಹವರನ್ನು ಪತ್ತೆ ಮಾಡಿ ಅವರ ಮೇಲೆ ಉಗ್ರ ಕ್ರಮ ಕೈಕೊಳ್ಳಬೇಕೆಂದು ಹೇಳಿದ್ದೇನೆ.

ರಾಜ್ಯದ ಅಗರಬತ್ತಿ ತಯಾರಕರು ಹಾಗೂ ಕಾರ್ಮಿಕರಿಗೆ ಮಾರಂಕಟ್ಟೆ ಅನಾನುಕೂಲತೆಯಿಂದ ಆರ್ಥಿಕ ಪಲ್ಲಟ್ಟಿನ ಪರಿಸ್ಥಿತಿಯ ಬಗ್ಗೆ

ಶ್ರೀ ಎಸ್. ಪುಟ್ಟಸ್ವಾಮಿ —ಮಾನ್ಯ ಅಧ್ಯಕ್ಷರೆ, ರಾಜ್ಯದ ಅಗರಬತ್ತಿ ತಯಾರಕರು ಹಾಗೂ ಕಾರ್ಮಿಕರಿಗೆ ಮಾರುಕಟ್ಟೆ ತೊಂದರೆಯಾಗಿ, ಆರ್ಥಿಕ ಪಲ್ಲಟ್ಟಿನ ಪರಿಸ್ಥಿತಿಯ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಬಂದರು ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಅಖಿಲ ಭಾರತ ಅಗರಬತ್ತಿ ತಯಾರಿಕಾ ಸಂಘದವರು ತಮ್ಮ ಅನೇಕ ಸಮಸ್ಯೆಗಳ ಮುಖ್ಯವಾಗಿ ಅವರಿಗೆ ಬೇಕಾಗಿರುವ ವಿವಿಧ ಕಚ್ಚಾ ಸಾಮಗ್ರಿಗಳ ಪೂರೈಕೆಯ ಬಗ್ಗೆ ಪರಾಮರ್ಶಿಸಲು ನಿವೇದಿಸಿಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ ೧೮-೧೧-೧೯೮೭ರಂದು ಅವರ ವಿವಿಧ ಸಮಸ್ಯೆಗಳನ್ನು ಪರಿಶೀಲಿಸುವ ಸಲುವಾಗಿ ಒಂದು ಸಭೆಯನ್ನು ಕರೆಯಲಾಗಿತ್ತು. ಕರ್ನಾಟಕ ಅರಣ್ಯ ಉದ್ದಿಮೆಯ ನಿಗಮವು ಬಿಳಿ ಗಂಧದ ಚಿಪ್ಪುಗಳನ್ನು ಹುಡಿಯಾಗಿ ಪರಿವರ್ತಿಸಿ ಅಗರಬತ್ತಿ ತಯಾರಕರಿಗೆ ಸರಬರಾಜು ಮಾಡುವ ವಿಷಯವು ಮಾಡಲಾಗಿದೆ. ಇದೇ ರೀತಿಯಾಗಿ ಬಿದಿರು ಕಡ್ಡಿಗಳನ್ನು ಸೀಳು ಮಾಡಿ ಅಗರಬತ್ತಿ ತಯಾರಕರಿಗೆ ಒದಗಿಸುವ ವಿಷಯವನ್ನು ಸಲುವಾಗಿ ಆದಿವಾಸಿಗಳ ಸಂಘಗಳಿಗೆ ಸರಬರಾಜು ಮಾಡಲಾಗುತ್ತಿದೆ. ಈ ಉದ್ದಿಮೆಯ ಬಗ್ಗೆ ಇನ್ನಷ್ಟು ಅಭ್ಯಾಸ ಮಾಡಲು ತಾಂತ್ರಿಕ ಸಲಹಾ ಸಮಿತಿಯವರಿಗೆ ವಹಿಸಿಕೊಡಲು ಉದ್ದೇಶಿಸಲಾಗಿದೆ. ಅಗರಬತ್ತಿಯ ಮಾರಂಕಟ್ಟೆಯ ಅವಶ್ಯಕತೆ ಬಗ್ಗೆ ಈ ಸಂಘದವರಿಂದ ಯಾವುದೇ ತರದ ಮನವಿಯು ಸರ್ಕಾರಕ್ಕೆ ಬಂದಿಲ್ಲ. ತಮ್ಮ ಉತ್ಪಾದನೆಗಳ ಮಾರಂಕಟ್ಟೆಯ ಅವಶ್ಯಕತೆಯ ವಿಚಾರದಲ್ಲಿ ಪ್ರಸ್ತುತ ತಕ್ಕ ಕ್ರಮ ತಯಾರಕರೇ ಕೈಗೊಳ್ಳುತ್ತಿದ್ದಾರೆ.

ಸರ್ಕಾರವು ಯಾವ ರೀತಿಯಿಂದ ಈ ಉದ್ದಿಮೆಗೆ ಸಹಾಯವನ್ನು ನೀಡಬೇಕೆಂಬುದನ್ನು ಪರಾಂಬರ್ಶಿಸಲು ಸಂಘದ ಸದಸ್ಯರುಗಳನ್ನು ಆಹ್ವಾನಿಸಲಾಗುವುದು.